2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 110/2021

| | | |
|---|---|---|
| ಸಾಕ್ಷಿದಾರರ ಹೆಸರು | - ಪರಮೇಶ | ಪಿಡಬ್ಲೂ - 05 |
| ತಂದೆಯ ಹೆಸರು | - ಜೋಗಪ್ಪ | ಸಿಡಬ್ಲೂ - 05 |
| ವಯಸ್ಸು | - 48 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಸುಭಾಷ ನಗರ, ಕಡೂರು ತಾ. | |

ದಿನಾಂಕಃ **17.04.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ ಮತ್ತು ಪಿರ್ಯಾದಿಯನ್ನು ನೋಡಿದ್ದೇನೆ. ಚಾಸಾ.3 ನಮ್ಮ ಮನೆಯ ಹತ್ತಿರ ಬಾಡಿಗೆಗೆ ವಾಸವಿದ್ದಾರೆ. ನನ್ನದು ಒಂದು ಟ್ರಾಕ್ಟರ್ ಇದ್ದು ಬಾಡಿಗೆಗೆ ಹೋಗುತ್ತೇನೆ.

2. ಸುಮಾರು 6 ವರ್ಷದ ಹಿಂದೆ ಬೀರೂರು ಗ್ರಾಮದ ಚಾಸಾ.4 ರವರ ಜಮೀನಿಗೆ ಟ್ರಾಕ್ಟರ್ ಹೊಡೆಯಲು ಹೋಗಿದ್ದೆ. ಅವರ ಜಮೀನು ಬೀರೂರಿನ ದರ್ಶನ್ ಕಾಂಕ್ರೀಟ್ ಫ್ಯಾಕ್ಟರಿ ಹಿಂದೆ ಇದೆ. ನಾನು ರಾತ್ರಿಯ ವರೆಗೂ ಬೇಸಾಯ ಮಾಡಲು ದಾಗ ಡೀಸೆಲ್ ಖಾಲಿಯಾಯಿತು. ನಾನು ವಾಪಸ್ಸು ಮನೆಗೆ ಬಂದೆ. ಮರುದಿನ ಬೆಳಿಗ್ಗೆ 9.00 ಗಂಟೆಗೆ ಅದೇ ಜಮೀನಿಗೆ ಟ್ರಾಕ್ಟರ ಹೊಡೆಯಲು ಹೋಗಿದ್ದೆ.

3. ಆ ಸಮಯದಲ್ಲಿ ಚಾಸಾ.3 ಹಾಗೂ ಅವರ ಮಕ್ಕಳು ಇದ್ದರು. ನಾನು ಟ್ರಾಕ್ಟರ್ ಓಡಿಸುತ್ತಿದ್ದಾಗಲೇ ಆರೋಪಿ ಹಾಗೂ ಚಾಸಾ.3 ಮತ್ತು ಅವರ ಮಕ್ಕಳ ನಡುವೆ ಗಲಾಟೆ ಯಾಯಿತು. ಆರೋಪಿ ಚಾಸಾ.4 ರವರಿಗೆ ಹಲ್ಲೆ ನಡೆಸಿದ್ದ, ಚಾಸಾ.4 ರವರು ಆಸ್ಪತ್ರೆಗೆ ಹೋದರು. ಆರೋಪಿ ಚಾಸಾ.2 ರವರ ಮೇಲೂ ಹಲ್ಲೆ ನಡೆಸಿದ್ದ, ನಾನು ಚಾಸಾ.2 ರವರನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದೆ. ಪೋಲೀಸರು ನನ್ನನ್ನು ಈ ಪ್ರಕರಣದಲ್ಲಿ ವಿಚಾರಿಸಿ ಹೇಳಿಕೆ

ಪಡೆದಿರುವುದಿಲ್ಲ. ನಾನು ಟ್ರಾಕ್ಟರ್ ಓಡಿಸಿದ ಜಮೀನಿನ ಛಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ. ನನಗೆ ಬೇರೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 31.07.2020 ರಂದು ಈ ಪ್ರಕರಣಕ್ಕೆ ಸಂಬಂದಿಸಿದಂತೆ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಹೇಳಿಕೆ ನೀಡುವಾಗ ದಿಃ 15.05.2020 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ನಾನು ಚಂದ್ರಮ್ಮರವರ ಜಮೀನಿನಲ್ಲಿ ಉಳುಮೆ ಮಾಡುವಾಗ ಆರೋಪಿತನು ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಬಂದು ಚಾಸಾ.1 ರಿಂದ 4 ರವರಿಗೆ ಅವಾಚ್ಯ ಶಬ್ದದಿಂದ ಬೈದಿರುತ್ತಾನೆಂದರೆ ಸರಿಯಲ್ಲ.

5. ನಂತರ ಆರೋಪಿತನು ಚಾಸಾ.3 ರವರಿಗೆ ಅವಾಚ್ಯ ಶಬ್ದದಿಂದ ಬೈದು ಅವರ ಜಾಕಿಟು ಹಿಡಿದು ಎಳೆದಾಡಿ ಹರಿದು ಗೌರವಕ್ಕೆ ದಕ್ಕೆ ತಂದಿರುತ್ತಾನೆಂದರೆ ಸರಿಯಲ್ಲ. ನಂತರ ಅಲ್ಲೇ ಬಿದ್ದಿದ್ದ ಮು.ಮಾ.1 ಅಡಿಕೆ ದಬ್ಬೆಯಿಂದ ಚಾಸಾ.2 ಹಾಗೂ 3 ರವರಿಗೆ ಹಲ್ಲೆ ಮಾಡಿ ಚಾಸಾ.3 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು ನೋವುಂಟು ಮಾಡಿರುತ್ತಾನೆಂದರೆ ಸರಿಯಲ್ಲ. ನಂತರ ಆರೋಪಿತನು ಚಾಸಾ.1 ರಿಂದ 4 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾನೆಂದರೆ ಸರಿಯಲ್ಲ.

6. ಆ ಸಮಯದಲ್ಲಿ ನಾನು ಹಾಗೂ ಚಾಸಾ.7 ರವರು ಸೇರಿ ಜಗಳ ಬಿಡಿಸಿರುತ್ತೇವೆಂದರೆ ಸರಿಯಲ್ಲ. ಆ ರೀತಿ ಜಗಳ ಬಿಡಿಸಿರುತ್ತೇವೆಂದು

ಈಗ ಓದಿ ಹೇಳಿದ ನಿಪಿ.14 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಶ್ರೀ.ಆರ್.ಎಸ್., ವಕೀಲರಿಂದ ಆರೋಪಿತರ ಪರವಾಗಿಃ

(ಆರೋಪಿ ಪರ ವಕೀಲರು ಸಾಕ್ಷ್ಯ ಅಧಿನಿಯಮದ ಕಲಂ.231 ಅಡಿಯಲ್ಲಿ ಅರ್ಜಿ ಸಲ್ಲಿಸಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ